RNU AIR DHARWAD

NOVEMBER 15, 2024

**AKASHAVANI - DHARWAD**

**PRADESH SAMACHARA (KANNADA) 07.05 A.M.**

<><><>

ಆಕಾಶವಾಣಿ

ಪ್ರದೇಶ ಸಮಾಚಾರ

ಓದಿದವರು: ಹರ್ಷವರ್ಧನ ಶೀಲವಂತ

<><><>

ಮುಖ್ಯಾಂಶಗಳು:

<><><>

- ರಾಜ್ಯದ 69 ಸಾವಿರದ 919 ಅಂಗನವಾಡಿ ಕೇಂದ್ರಗಳಿಗೆ, ಶಾಲಾ ಪೂರ್ವ ಶಿಕ್ಷಣ ಕಿಟ್ ವಿತರಣೆ – ಮುಖ್ಯಮಂತ್ರಿ ಸಿದ್ದರಾಮಯ್ಯ.
- ಮಕ್ಕಳ ದಿನಾಚರಣೆ; 'ಕಲಿಕೆ ನಮ್ಮ ಹಕ್ಕು; ನಮ್ಮ ಬಾಲ್ಯ ಕಸಿಯಬೇಡಿ' – ಮಕ್ಕಳಿಂದ ಜನ ಜಾಗ್ರತಿ.
- ಪರಿಶಿಷ್ಟ ಸಮುದಾಯವನ್ನು ಸುದೃಢಗೊಳಿಸಲು, ಜನಪರ ಯೋಜನೆಗಳು ಅರ್ಹರನ್ನು ತಲುಪಬೇಕು – ಪಿ.ಎಂ.ನರೇಂದ್ರ ಸ್ವಾಮಿ.
- ಸಹಕಾರ ಕ್ಷೇತ್ರಗಳಿಂದ, 2 ಲಕ್ಷ ಕೋಟಿ ಠೇವಣಿ ಹಾಗೂ 2 ಲಕ್ಷ ಕೋಟಿ ಸಾಲ ವಿತರಣೆ – ಜಿ.ಟಿ.ದೇವೇಗೌಡ.

<><><>

ಈಗ ವಾರ್ತೆಗಳ ವಿವರ

<><><>

ಸಮಗ್ರ ಶಿಶು ಅಭಿವೃದ್ಧಿ ಯೋಜನೆಯಡಿ, 69 ಸಾವಿರದ 919 ಅಂಗನವಾಡಿ ಕೇಂದ್ರಗಳಿಗೆ, ತಲಾ 3 ಸಾವಿರ ರೂಪಾಯಿ ಘಟಕ ವೆಚ್ಚದಂತೆ, ಶಾಲಾ ಪೂರ್ವ ಶಿಕ್ಷಣ ಕಿಟ್‌ಗಳನ್ನು, 20 ಕೋಟಿ ರೂಪಾಯಿ ವೆಚ್ಚದಲ್ಲಿ ಖರೀದಿಸಲು ಸಚಿವ ಸಂಪುಟ ಆಡಳಿತಾತ್ಮಕ ಅನುಮೋದನೆ ನೀಡಿದೆ ಎಂದು, ಮುಖ್ಯಮಂತ್ರಿ ಸಿದ್ದರಾಮಯ್ಯ ಎಕ್ಸ್ ಜಾಲತಾಣದಲ್ಲಿ ಪ್ರಕಟಿಸಿದ್ದಾರೆ. ಬೆಂಗಳೂರಿನಲ್ಲಿ, ಅವರ ಅಧ್ಯಕ್ಷತೆಯಲ್ಲಿ ಸಚಿವ ಸಂಪುಟ ಸಭೆ ನಡೆಯಿತು. ಸಕ್ಷಮ್ ಯೋಜನೆಯಡಿ, ರಾಜ್ಯದ ಅಂಗನವಾಡಿ ಕೇಂದ್ರಗಳಿಗೆ, ಎಲ್.ಇ.ಡಿ. ಮತ್ತು ಇತರೆ ಸೌಲಭ್ಯಗಳನ್ನು, 174 ಕೋಟಿ ರೂಪಾಯಿ ವೆಚ್ಚದಲ್ಲಿ ಒದಗಿಸಲು, ಒಪ್ಪಿಗೆ ಸೂಚಿಸಲಾಗಿದೆ. ರಾಜ್ಯದ 7 ವೈದ್ಯಕೀಯ ಕಾಲೇಜುಗಳಲ್ಲಿ, 50 ಹಾಸಿಗೆಗಳ ಸಾಮರ್ಥ್ಯದ, ಒಟ್ಟು 7 ಗಂಭೀರ ತುರ್ತು ಚಿಕಿತ್ಸಾ ಘಟಕಗಳ – **Critical Care Block** ಗಳ ನಿರ್ಮಾಣಕ್ಕೆ, 148 ಕೋಟಿ ರೂಪಾಯಿಗಳ

ಅಂದಾಜು ಮೊತ್ತಕ್ಕೆ ಅನುಮೋದನೆ ದೊರೆತಿದೆ. ರಾಷ್ಟ್ರೀಯ ಕೃಷಿ ವಿಕಾಸ ಯೋಜನೆಯಡಿ, ಬೆಂಗಳೂರಿನ ಹೆಬ್ಬಾಳದಲ್ಲಿ ಸಾವಯವ ಮತ್ತು ಸಿರಿಧಾನ್ಯ ಹಬ್ ಅನ್ನು, 20 ಕೋಟಿ ರೂಪಾಯಿ ವೆಚ್ಚದಲ್ಲಿ ಸ್ಥಾಪಿಸಲು ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ. 28 ಕೋಟಿ ರೂಪಾಯಿ ಅಂದಾಜು ವೆಚ್ಚದಲ್ಲಿ, ಕೃತಕ ಬುದ್ಧಿಮತ್ತೆ ಉತ್ಕೃಷ್ಟತಾ ಕೇಂದ್ರವನ್ನು ಬೆಂಗಳೂರಿನಲ್ಲಿ ಸ್ಥಾಪಿಸಲು, ಸಚಿವ ಸಂಪುಟ ನಿರ್ಧರಿಸಿದೆ.

<><><>

'ಮೊದಲು ನಾವು ಚೆನ್ನಾಗಿ ಕಲಿಯೋಣ; ಸೂಕ್ತ ವಯಸ್ಸಿನಲ್ಲಿ ಶ್ರಮ ಹಾಕಿ ದುಡಿಯೋಣ' ಎಂದು, ಧಾರವಾಡ ಜಿಲ್ಲೆ, ಕಲಘಟಗಿ ತಾಲೂಕು, ದೇವಿಕೊಪ್ಪದ ಸರ್ಕಾರಿ ಪ್ರೌಢ ಶಾಲೆಯ ಸಂಸತ್ತಿನ ಪ್ರಧಾನಮಂತ್ರಿ ಮಲ್ಲವ್ವ ಕುರಬರ, 'ಮಕ್ಕಳ ದಿನಾಚರಣೆ' ಸಂದೇಶ ನೀಡಿದ್ದಾರೆ. "ಕಲಿಯೋಣ ಬಾರಾ ಕಲಿಯೋಣ" ಕಾರ್ಯಕ್ರಮದಡಿ, ಮಕ್ಕಳ ದಿನಾಚರಣೆ ನಿಮಿತ್ತ, ಬಾಲ ಕಾರ್ಮಿಕ ಹಾಗೂ ಕಿಶೋರ ಕಾರ್ಮಿಕ ನಿರ್ಮೂಲನೆ ಜಾಗೃತಿ, ಆಂದೋಲನದ ನೇತೃತ್ವ ವಹಿಸಿ, ಅವರು ಮಾತನಾಡಿದರು. ಚಾ ಚಾ ನೆಹರು ಅವರ 135ನೇ ಜನ್ಮ ದಿನಾಚರಣೆ ಅಂಗವಾಗಿ, ಸ್ವತಂತ್ರ ಭಾರತದ ಪ್ರಥಮ ಪ್ರಧಾನಮಂತ್ರಿಯವರ ಸ್ಮೃತಿಗೆ ಗೌರವಾರ್ಪಿಸಿದ ಶಾಲೆಯ ಮಕ್ಕಳು, 'ಕಲಿಕೆ ನಮ್ಮ ಹಕ್ಕು; ನಮ್ಮ ಬಾಲ್ಯ ಕಸಿಯಬೇಡಿ' ಎಂದರು.

<><><>

ಶಿವಮೊಗ್ಗ ಜಿಲ್ಲಾ ಪಂಚಾಯ್ತಿಯ, ಅಬ್ದುಲ್ ನಜೀರ್ ಸಾಬ್ ಸಭಾಂಗಣದಲ್ಲಿ, ಮಕ್ಕಳ ದಿನಾಚರಣೆ ನಿಮಿತ್ತ, ಇದೇ ಮೊದಲ ಬಾರಿಗೆ ಏರ್ಪಡಿಸಲಾಗಿದ್ದ, ಪ್ರೌಢ ಶಾಲಾ ವಿದ್ಯಾರ್ಥಿಗಳ, ರಾಜ್ಯ ಮಟ್ಟದ ಯುವ ಅಣುಕು ಸಂಸತ್, ಯಶಸ್ವಿಯಾಗಿ ನಡೆಯಿತು. ಮೌಲಿಕ ಚರ್ಚೆ, ವಿಷಯ ಮಂಡನೆಯ ತಜ್ಞತೆ ಆಧರಿಸಿ, ಪುರಸ್ಕಾರಕ್ಕೆ ಆಯ್ಕೆ ಮಾಡುವುದಾಗಿ, ತೀರ್ಪುಗಾರರಾದ ಸತ್ಯನಾರಾಯಣ ತಿಳಿಸಿದ್ದಾರೆ.

<><><>

ಧಾರವಾಡದ ಸರ್ಕಾರಿ ಶಿಕ್ಷಕಿಯರ ತರಬೇತಿ ಸಂಸ್ಥೆಯ, ಶಾಲಾ ಸಿದ್ಧತಾ ಕೇಂದ್ರದಲ್ಲಿ, ಮಕ್ಕಳ ದಿನಾಚರಣೆ ಅಂಗವಾಗಿ, ವಿಶೇಷ ಅಗತ್ಯವುಳ್ಳ ಮಗುವಿನ, 'ನನಗೂ ಶಾಲೆ' ಕಾರ್ಯಕ್ರಮವನ್ನು, ಕ್ಷೇತ್ರ ಶಿಕ್ಷಣಾಧಿಕಾರಿ ರಾಮಕೃಷ್ಣ ಸದಲಗಿ ಉದ್ಘಾಟಿಸಿದರು.

<><><>

ಮಧುಮೇಹದಿಂದ ರಾಜ್ಯದ ಜನಸಂಖ್ಯೆಯ ಶೇಕಡ 14 ದಶಾಂಶ 8 ರಷ್ಟು ಜನ ಬಳಲುತ್ತಿದ್ದಾರೆ ಎಂದು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಖಾತೆ ಸಚಿವ ದಿನೇಶ ಗುಂಡೂರಾವ ತಿಳಿಸಿದ್ದಾರೆ. ರಾಜ್ಯ ಸರ್ಕಾರ, 'ಗೃಹ ಆರೋಗ್ಯ' ಎಂಬ ವಿಶಿಷ್ಟ ಯೋಜನೆ ಜಾರಿಗೊಳಿಸಿದ್ದು, ಮನೆ ಮನೆಗೆ ಭೇಟಿ ನೀಡುವ ಆರೋಗ್ಯ ಕಾರ್ಯಕರ್ತರು, ಮಧುಮೇಹ ಹಾಗೂ ರಕ್ತದೊತ್ತಡ ತಪಾಸಣೆ ಮಾಡಿ, ಉಚಿತ ಔಷಧಿ ವಿತರಿಸಲಿದ್ದಾರೆ ಎಂದು, ಸಾಮಾಜಿಕ ಮಾಧ್ಯಮ ಎಕ್ಸ್ ಮೂಲಕ ತಿಳಿಸಿದ್ದಾರೆ.

<><><>

'ಆರೈಕೆಯ ಅಡೆತಡೆಗಳನ್ನು ತೊಡೆದು ಹಾಕಿ, ಚಿಕಿತ್ಸೆಯ ಅಂತರವನ್ನು ನಿವಾರಿಸುವುದು' ಎಂಬ ಘೋಷವಾಕ್ಯದೊಂದಿಗೆ, 'ಮಧುಮೇಹ ಮತ್ತು ಯೋಗಕ್ಷೇಮ' ಎಂಬ ಧ್ಯೇಯದೊಂದಿಗೆ, ವಿಶ್ವ ಮಧುಮೇಹ ದಿನಾಚರಣೆಯನ್ನು, ನಿನ್ನೆ ಆಚರಿಸಲಾಯಿತು.

<><><>

ಪೋಷಣ್ ಮಾಸಾಚರಣೆ ಹಿನ್ನೆಲೆ, ಗರ್ಭಿಣಿಯರು, ತಾಯಂದಿರು ಮತ್ತು ಮಕ್ಕಳಲ್ಲಿ, ಅಪೌಷ್ಟಿಕತೆ ಹೋಗಲಾಡಿಸಲು ಯೋಜಿಸಲಾಗಿದೆ. ಗರ್ಭಿಣಿಯರು ಮತ್ತು ತಾಯಂದಿರಲ್ಲಿ ಕಂಡುಬರುವ ಮಧುಮೇಹ ಮತ್ತು ಪೂರಕ ಚಿಕಿತ್ಸೆ ಕುರಿತು, ಪ್ರದೇಶ ಸಮಾಚಾರಕ್ಕಾಗಿ ಮಾಹಿತಿ ನೀಡಿದ್ದಾರೆ, ಯಾದಗಿರಿ ಜಿಲ್ಲೆ, ಸುರಪುರ ತಾಲೂಕು ಕಕ್ಕೇರಿಯ, ಶಲ್ಯ ಶಸ್ತ್ರ ಚಿಕಿತ್ಸೆ ತಜ್ಞ ವೈದ್ಯೆ ಡಾಕ್ಟರ್ ಮಹಾಲಕ್ಷ್ಮೀ ಬೀಳಗಿ.

<><><>

ಡಾಕ್ಟರ್ ಮಹಾಲಕ್ಷ್ಮೀ ಬೀಳಗಿ ಧ್ವನಿ 40 ಸೆಕೆಂದುಗಳು

<><><>

ಪ್ರದೇಶ ಸಮಾಚಾರ ಕೇಳುತ್ತಿದ್ದೀರಿ..

<><><>

ಸಾಮಾಜಿಕ ಅಸಮಾನತೆ, ಸಮಾಜಕ್ಕೆ ಅಂಟಿದ ಪಿಡುಗು. ಪರಿಶಿಷ್ಟ ಸಮುದಾಯವನ್ನು ಸುದೃಢಗೊಳಿಸಲು, ಜನಪರ ಯೋಜನೆಗಳನ್ನು ಹಾಗೂ ಸೌಲಭ್ಯಗಳು ಅರ್ಹರನ್ನು ತಲುಪಲು, ಅಧಿಕಾರಿಗಳು ಬದ್ಧತೆಯಿಂದ ಕರ್ತವ್ಯ ನಿರ್ವಹಿಸುವಂತೆ, ರಾಜ್ಯ ವಿಧಾನ ಮಂಡಳ ಅನುಸೂಚಿತ ಜಾತಿ ಮತ್ತು ಅನುಸೂಚಿತ ಪಂಗಡಗಳ ಕಲ್ಯಾಣ ಸಮಿತಿ ಅಧ್ಯಕ್ಷ ಪಿ.ಎಂ.ನರೇಂದ್ರ ಸ್ವಾಮಿ ಸೂಚಿಸಿದ್ದಾರೆ. ಧಾರವಾಡದ ಸೃಜನಾ ರಂಗ ಮಂದಿರದಲ್ಲಿ, ಅನುಸೂಚಿತ ಜಾತಿ ಮತ್ತು ಅನುಸೂಚಿತ ಪಂಗಡಗಳ ಅಭಿವೃದ್ಧಿಗಾಗಿ ಕೈಗೊಂಡ ಯೋಜನೆಗಳ ಪ್ರಗತಿ ಪರಿಶೀಲಿಸಿ, ಮಾತನಾಡಿದರು. ಇಲಾಖೆಗಳು ಶೇಕಡ 24ರಷ್ಟು ಯೋಜನಾ ಅನುದಾನವನ್ನು, ಅನುಸೂಚಿತ ವರ್ಗಗಳಿಗೆ ಮೀಸಲಿಡಬೇಕು. ನಿಗದಿ ಪಡಿಸಿದ ಇಲಾಖಾ ಅನುದಾನವನ್ನು, ನಿರ್ಧಿಷ್ಟ ವೇಳೆಯಲ್ಲಿಯೇ ವೆಚ್ಚ ಮಾಡಬೇಕು ಎಂದು, ಅವರು ನಿರ್ದೇಶಿಸಿದರು.

<><><>

ರಾಜ್ಯದಲ್ಲಿ 47 ಸಾವಿರ ಸಹಕಾರ ಕ್ಷೇತ್ರಗಳಿದ್ದು, 2 ಲಕ್ಷ ಕೋಟಿ ಠೇವಣಿ ಇರಿಸಲಾಗಿದೆ. 2 ಲಕ್ಷ ಕೋಟಿ ಸಾಲ ವಿತರಿಸಲಾಗಿದೆ ಎಂದು, ಶಾಸಕ ಹಾಗೂ ರಾಜ್ಯ ಸಹಕಾರ ಮಹಾಮಂಡಳ ನಿಯಮಿತ ಅಧ್ಯಕ್ಷ, ಜಿ.ಟಿ.ದೇವೇಗೌಡ ಹೇಳಿದ್ದಾರೆ. ಬೆಂಗಳೂರಿನ ಸೆಂಟ್ರಲ್ ಕಾಲೇಜು ಆವರಣದ, ಜ್ಞಾನ ಜ್ಯೋತಿ ಸಭಾಂಗಣದಲ್ಲಿ ಆಯೋಜಿಸಿದ್ದ, 71ನೇ ಅಖಿಲ ಭಾರತ ಸಹಕಾರ ಸಪ್ತಾಹ-2024ಕ್ಕೆ, ಚಾಲನೆ ನೀಡಿ, ಮಾತನಾಡಿದರು. ಭಾರತದ ಪ್ರಥಮ ಪ್ರಧಾನಮಂತ್ರಿ ಪಂಡಿತ ಜವಹರಲಾಲ್ ನೆಹರು ಅವರು ಪಂಚವಾರ್ಷಿಕ ಯೋಜನೆ ಮೂಲಕ, ಸಹಕಾರ ರಂಗವನ್ನು ಬಲಪಡಿಸಿದ ಹಿನ್ನೆಲೆ, ಅವರ ಜನ್ಮದಿನದಂದು ಸಹಕಾರ ಸಪ್ತಾಹವನ್ನು, ಹಬ್ಬದ ರೀತಿಯಲ್ಲಿ ಆಚರಿಸಲಾಗುತ್ತದೆ ಎಂದರು. ಸಹಕಾರ ಖಾತೆ ಸಚಿವ ಕೆ.ಎನ್. ರಾಜಣ್ಣ ಅವರು "ಸಹಕಾರ ಪತ್ರಿಕೆ" ವಿಶೇಷ ಸಂಚಿಕೆ ಬಿಡುಗಡೆ ಮಾಡಿ, "ವಿಕಸಿತ ಭಾರತ ನಿರ್ಮಾಣದಲ್ಲಿ ಸಹಕಾರ ಸಂಸ್ಥೆಗಳ ಪಾತ್ರ" ಎಂಬ ಧ್ಯೇಯದೊಂದಿಗೆ ಸಪ್ತಾಹ ಆಚರಿಸಲಾಗುತ್ತಿದೆ ಎಂದರು.

<><><>

ಧಾರವಾಡದಿಂದ ಕಿತ್ತೂರು ಮಾರ್ಗವಾಗಿ, ಬೆಳಗಾವಿ ವರೆಗೆ ನೇರ ಸಂಪರ್ಕ ಕಲ್ಪಿಸುವ, 73 ಕಿಲೋ ಮೀಟರ್ ಉದ್ದದ, ನೂತನ ರೈಲು ಮಾರ್ಗ ನಿರ್ಮಾಣದ ಹಿನ್ನೆಲೆ, ಕೇಂದ್ರ ರೈಲ್ವೆ ಖಾತೆ ರಾಜ್ಯ ಸಚಿವ ವಿ. ಸೋಮಣ್ಣ, ಬೆಳಗಾವಿ ಜಿಲ್ಲಾಧಿಕಾರಿ ಕಚೇರಿಯಲ್ಲಿ ಸಭೆ ನಡೆಸಿದರು. ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಸಚಿವರು, ಧಾರವಾಡದ ಕ್ಯಾರಕೊಪ್ಪದಿಂದ ಬೆಳಗಾವಿ ದೇಸೂರದ ವರೆಗೆ ರೈಲು ಹಳಿ ಅಳವಡಿಸಬೇಕಿದೆ ಎಂದರು. ಬೆಳಗಾವಿ, ಧಾರವಾಡ ಮಧ್ಯೆ ರೈಲು ಸಂಪರ್ಕ ಕಲ್ಪಿಸಲು, ಒಟ್ಟು 888 ಎಕರೆ ಜಮೀನು ಸ್ವಾಧೀನ ಪಡಿಸಿಕೊಳ್ಳಬೇಕಿದೆ. ಯೋಜನೆಯ ಅನುಷ್ಠಾನಕ್ಕೆ, ಬೆಳಗಾವಿ ವ್ಯಾಪ್ತಿಯಲ್ಲಿ 600 ಎಕರೆ, ಧಾರವಾಡ ವ್ಯಾಪ್ತಿಯಲ್ಲಿ 200 ಎಕರೆ ಜಮೀನು, ಅಗತ್ಯವಿದೆ. ಬೆಳಗಾವಿ ಜಿಲ್ಲಾಧಿಕಾರಿ, ರೈಲ್ವೆ ಇಲಾಖೆಗೆ 446 ಎಕರೆ ಜಮೀನನ್ನು, ಮುಂದಿನ ತಿಂಗಳು ಹಸ್ತಾಂತರಿಸಲಿದ್ದಾರೆ ಎಂದರು. ರಾಜ್ಯಾದ್ಯಂತ 39 ಸಾವಿರ ಕೋಟಿ ರೂಪಾಯಿ ವೆಚ್ಚದಲ್ಲಿ, ರಾಯಚೂರು, ಯಾದಗಿರಿ, ಕುಡಚಿ ಸೇರಿದಂತೆ, ರಾಜ್ಯದ ಹಲವೆಡೆ ರೈಲ್ವೆ ಯೋಜನೆಗಳು ಪ್ರಗತಿಯಲ್ಲಿದ್ದು, ಕಾಲಮಿತಿಯಲ್ಲಿ ಪೂರ್ಣಗೊಳಿಸಲಾಗುವುದು ಎಂದು, ಸಚಿವ ಸೋಮಣ್ಣ ತಿಳಿಸಿದರು.

<><><>

ಕರ್ನಾಟಕ ಏಕೀಕರಣ ಚಳವಳಿಯಲ್ಲಿ, ಪ್ರಮುಖ ಪಾತ್ರವಹಿಸಿ, ಅದನ್ನು ಸಾಧಿಸಿದ ಧೀಮಂತ ಹೋರಾಟಗಾರ, ಕರ್ನಾಟಕ ರತ್ನ, ಮಾಜಿ ಮುಖ್ಯಮಂತ್ರಿ ಎಸ್.ನಿಜಲಿಂಗಪ್ಪ ಅವರ, ಚಿತ್ರದುರ್ಗದ ಮನೆಯನ್ನು, ರಾಜ್ಯ ಸರ್ಕಾರ ಖರೀದಿಸಿ, ಅಭಿವೃದ್ಧಿ ಪಡಿಸಲು, 5 ಕೋಟಿ ರೂಪಾಯಿ ಅನುದಾನ ಒದಗಿಸಲಿದೆ ಎಂದು, ಬೃಹತ್ ಕೈಗಾರಿಕೆ ಖಾತೆ ಸಚಿವ ಎಂ.ಬಿ.ಪಾಟೀಲ, ಎಕ್ಸ್ ಮಾಧ್ಯಮದಲ್ಲಿ ಪ್ರಕಟಿಸಿದ್ದಾರೆ.

<><><>

ಕ್ರೀಡೆಯಲ್ಲಿ ಭಾಗವಹಿಸುವ ಮಕ್ಕಳನ್ನು ಪ್ರೋತ್ಸಾಹಿಸಲು, ಕೃಪಾಂಕ ನೀಡಬೇಕು ಎಂಬ, ರಾಜ್ಯ ಒಲಿಂಪಿಕ್ಸ್ ಅಸೋಸಿಯೇಷನ್ ಅಧ್ಯಕ್ಷ ಗೋವಿಂದರಾಜು ಅವರ ಬೇಡಿಕೆಯನ್ನು, ಸರ್ಕಾರ ಸಕಾರಾತ್ಮಕವಾಗಿ ನಿರ್ಣಯಿಸಲಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದ್ದಾರೆ. ಬೆಂಗಳೂರಿನ ಕಂಠೀರವ ಕ್ರೀಡಾಂಗಣದಲ್ಲಿ, ಕರ್ನಾಟಕ ತೃತೀಯ ಮಿನಿ ಒಲಂಪಿಕ್ಸ್ ಪಂದ್ಯಾವಳಿಗೆ ಚಾಲನೆ ನೀಡಿ, ಮಾತನಾಡಿದರು. ರಾಷ್ಟ್ರ ಮತ್ತು ಅಂತಾರಾಷ್ಟ್ರೀಯ ಪಂದ್ಯಾವಳಿಗಳಲ್ಲಿ ವಿಜೇತರಾದವರಿಗೆ, ಪೊಲೀಸ್ ಇಲಾಖೆಯಲ್ಲಿ ಶೇಕಡ 3 ಮತ್ತು ಇತರೆ ಇಲಾಖೆಯಲ್ಲಿ ಶೇಕಡ 2ರಷ್ಟು ಉದ್ಯೋಗ ಮೀಸಲಿಡಲಾಗಿದೆ. ಒಲಂಪಿಕ್ಸ್‌ನಲ್ಲಿ ಚಿನ್ನ ಗೆಲ್ಲುವ ರಾಜ್ಯದ ಕ್ರೀಡಾಪಟುವಿಗೆ, 6 ಕೋಟಿ ರೂಪಾಯಿ, ಬೆಳ್ಳಿ ಪದಕ ವಿಜೇತರಿಗೆ ನಾಲ್ಕು ಕೋಟಿ ರೂಪಾಯಿ ನೀಡಲಾಗುತ್ತಿದೆ ಎಂದು ಮುಖ್ಯಮಂತ್ರಿ ನುಡಿದರು.

<><><>

ಧರ್ತಿ ಆಬಾ ಭಗವಾನ್ ಬಿರ್ಸಾ ಮುಂಡಾ ಅವರ, 150ನೇ ಜನ್ಮ ದಿನವನ್ನು ಇಂದು, ಜನ ಜಾತಿಯ ಗೌರವ ದಿನವಾಗಿ, ದೇಶಾದ್ಯಂತ ಆಚರಿಸಲಾಗುತ್ತಿದೆ. ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು, ಬಿಹಾರದ ಜಮುಯಿಯಲ್ಲಿ, ಜನ ಜಾತೀಯ ಗೌರವ್ ದಿವಸ್ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲಿದ್ದಾರೆ. ಭಗವಾನ್ ಬಿರಸಾ ಮುಂಡಾ ಅವರ ಸ್ಮೃತಿಯ ಅಂಚೆ ಚೀಟಿ ಹಾಗೂ ನಾಣ್ಯವನ್ನು ಅವರು ಬಿಡುಗಡೆ ಮಾಡಲಿದ್ದಾರೆ.

<><><>

ಇಂದು ಬೆಳಗ್ಗೆ 11:30 ರಿಂದ ಆಕಾಶವಾಣಿ ಹಾಗೂ ದೂರದರ್ಶನ ಈ ಕಾರ್ಯಕ್ರಮವನ್ನು ನೇರವಾಗಿ ಪ್ರಸಾರ ಮಾಡಲಿವೆ.

<><><>

ಪ್ರಧಾನಮಂತ್ರಿಯವರ ಕಾರ್ಯಕ್ರಮದ ಬಳಿಕ, 12 ಗಂಟೆಯ ಪ್ರದೇಶ ಸಮಾಚಾರ ಬಿತ್ತರಗೊಳ್ಳಲಿದೆ.

<><><>

ಇಂದು ಗುರು ನಾನಕ್ ಜಯಂತಿ. ಪೂಜ್ಯ ಗುರು ನಾನಕ್ ಅವರ ಜನ್ಮ ದಿನದ ನೆನಪಿಗಾಗಿ, ಈ ದಿನವನ್ನು ಶ್ರದ್ಧಾ ಭಕ್ತಿಯಿಂದ, ಗುರು ಪರ್ವವಾಗಿ ಆಚರಿಸಲಾಗುತ್ತಿದೆ. ಕಾರ್ತಿಕ್ ಪೂರ್ಣಿಮಾ ಎಂದು ಕರೆಯಲಾಗುವ ಈ ದಿನ, ಸಿಖ್ ಬಂಧುಗಳು ಗುರುದ್ವಾರಾಗಳಲ್ಲಿ ವಿಶೇಷ ಪೂಜೆ, ಪ್ರಸಾದ ವಿತರಣೆ ಕೈಗೊಂಡಿದ್ದಾರೆ. ರಾಷ್ಟ್ರಪತಿ, ಉಪ ರಾಷ್ಟ್ರಪತಿ ಹಾಗೂ ಗಣ್ಯರು ಶುಭಾಶಯ ಕೋರಿದ್ದಾರೆ.

<><><>

ಬೆಂಗಳೂರಿನ ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಪ್ರೋತ್ಸಾಹಕ ಸೊಸೈಟಿ, ಧಾರವಾಡದ ಪ್ರಾದೇಶಿಕ ವಿಜ್ಞಾನ ಕೇಂದ್ರ ಹಾಗೂ ಅಭಿನಯ ಭಾರತಿ, ಸಂಯುಕ್ತ ಆಶ್ರಯದಲ್ಲಿ, "ಧಾರವಾಡ ವಿಜ್ಞಾನ ನಾಟಕೋತ್ಸವ"ವನ್ನು, ಇಂದಿನಿಂದ 17ರ ವರೆಗೆ, ಧಾರವಾಡದ ಪಾವಟೆನಗರದ, ಪ್ರಾದೇಶಿಕ ವಿಜ್ಞಾನ ಕೇಂದ್ರದಲ್ಲಿ ಆಯೋಜಿಸಿವೆ. ನಾಟಕಗಳ ಪ್ರದರ್ಶನ ಸಮಯ, ನಿತ್ಯ ಸಂಜೆ 5.30ಕ್ಕೆ ಎಂದು, ಸಂಘಟಕರು ತಿಳಿಸಿದ್ದಾರೆ.

<><><>

ಬೆಂಗಳೂರು ಹಾಗೂ ಧಾರವಾಡ ಆಕಾಶವಾಣಿಯ, ಪ್ರಾದೇಶಿಕ ಸುದ್ದಿ ವಿಭಾಗದ ಮುಖ್ಯಸ್ಥ ರಾಯ್ ಚಾಕೊ, ಸಹಾಯಕ ನಿರ್ದೇಶಕರಾದ ಎಚ್.ಆರ್.ಸುಧೀಂದ್ರ ಹಾಗೂ ಪೊನ್ನುಮೋನ್ ಮತ್ತು ಸಿಬ್ಬಂದಿ, ಬೆಂಗಳೂರಿನಲ್ಲಿ ಸ್ವಚ್ಛತಾ ಪ್ರತಿಜ್ಞೆ ಕೈಗೊಂಡರು.

<><><>

ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು

<><><>

- ರಾಜ್ಯದ 69 ಸಾವಿರದ 919 ಅಂಗನವಾಡಿ ಕೇಂದ್ರಗಳಿಗೆ, ಶಾಲಾ ಪೂರ್ವ ಶಿಕ್ಷಣ ಕಿಟ್ ವಿತರಣೆ – ಮುಖ್ಯಮಂತ್ರಿ ಸಿದ್ದರಾಮಯ್ಯ.
- ಮಕ್ಕಳ ದಿನಾಚರಣೆ; 'ಕಲಿಕೆ ನಮ್ಮ ಹಕ್ಕು; ನಮ್ಮ ಬಾಲ್ಯ ಕಸಿಯಬೇಡಿ' – ಮಕ್ಕಳಿಂದ ಜನ ಜಾಗ್ರತಿ.
- ಪರಿಶಿಷ್ಟ ಸಮುದಾಯವನ್ನು ಸುದೃಢಗೊಳಿಸಲು, ಜನಪರ ಯೋಜನೆಗಳು ಅರ್ಹರನ್ನು ತಲುಪಬೇಕು – ಪಿ.ಎಂ.ನರೇಂದ್ರ ಸ್ವಾಮಿ.
- ಸಹಕಾರ ಕ್ಷೇತ್ರಗಳಿಂದ, 2 ಲಕ್ಷ ಕೋಟಿ ಠೇವಣಿ ಹಾಗೂ 2 ಲಕ್ಷ ಕೋಟಿ ಸಾಲ ವಿತರಣೆ – ಜಿ.ಟಿ.ದೇವೇಗೌಡ.

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

<><><>

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಈ ಬೆಳಗ್ಗೆ 7 ಗಂಟೆ 35 ನಿಮಿಷಕ್ಕೆ.

<><><>

ಹರ್ಷ